ಓ ಎಸ್ ನಂಃ 57/2022
ಡಿ. ಡಬ್ಲ್ಯೂ-2

**(ಇಂದು ದಿನಾಂಕ 12-09-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಎನ್ ಬಿ ಕೆ ವಕೀಲರಿಂದ**

ನಮ್ಮ ಕುಟುಂಬದ ಮೂಲ ಪುರುಷ ಫಕ್ಕಿರಪ್ಪ ಶಿವಮ್ಮನವರ . ಫಕ್ಕಿರಪ್ಪ ಇವರ ಹೆಂಡತಿಯ ಹೆಸರು ಲಕ್ಕಮ್ಮ @ ಲಕ್ಕವ್ವ . ಸದರಿ ಫಕ್ಕಿರಪ್ಪ ಮತ್ತು ಲಕ್ಕಮ್ಮ ಇವರಿಗೆ ನಾಲ್ಕು ಜನ ಗಂಡು ಮಕ್ಕಳು ಮತ್ತು ಏಳು ಜನ ಹೆಣ್ಣು ಮಕ್ಕಳು . ಅವರೆಂದರೆ ಗಂಗಪ್ಪ , ಬುದ್ಧಿವಂತಪ್ಪ , ಅಪ್ಪಣ್ಣ ಮತ್ತು ಯಲ್ಲಪ್ಪ . ಅಪ್ಪಣ್ಣ ಮತ್ತು ಯಲ್ಲಪ್ಪ ಅವಿವಾಹಿತರಾಗಿ ಮರಣ ಹೊಂದಿದ್ದಾರೆ . ಹೆಣ್ಣು ಮಕ್ಕಳ ಹೆಸರು ಫಕ್ಕಿರವ್ವ , ಬಸವ್ವ , ಯಲ್ಲವ್ವ , ಬಾಳವ್ವ , ಸಕ್ರೆವ್ವ , ಸಾವಕ್ಕ ಮತ್ತು ಹನಮವ್ವ .

ಗಂಗಪ್ಪ ಇವರು ನನ್ನ ತಂದೆಯಾಗಿರುತ್ತಾರೆ . ಕರೆವ್ವ ಇವರು ನನ್ನ ತಾಯಿ ಇರುತ್ತಾರೆ . ನನ್ನ ತಂದೆಗೆ ಐದು ಜನ ಗಂಡು ಮತ್ತು ನಾಲ್ಕು ಜನ ಹೆಣ್ಣು ಮಕ್ಕಳು . ಗಂಡು ಮಕ್ಕಳ ಹೆಸರು ಹನಮಂತಪ್ಪ , ಶೇಖಪ್ಪ , ನಂಜಣ್ಣ , ನೂರೊಂದಪ್ಪ ಮತ್ತು ಯಲ್ಲಪ್ಪ , ಹೆಣ್ಣು ಮಕ್ಕಳ ಹೆಸರು ಶೇಖವ್ವ , ಗೌರವ್ವ , ಚನ್ನವ್ವ ಮತ್ತು ನಾಗವ್ವ .

ಬುದ್ಧಿವಂತಪ್ಪ ಅವರು ನನ್ನ ಕಾಕಾ ಇದ್ದು , ಅವನ ಹೆಂಡತಿಯ ಹೆಸರು ಯಲ್ಲವ್ವ . ಬುದ್ಧಿವಂತಪ್ಪಗೆ ಗಂಗವ್ವ ಎನ್ನುವ ಎರಡನೇಯ ಹೆಂಡತಿ ಇದ್ದಳು . ಯಲ್ಲಮ್ಮ ಇವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ . ಗಂಗವ್ವ ಇವರಿಗೆ ಮೂರು ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು . ಅವರೆಂದರೆ ಮೋಹನ , ನಾರಾಯಣ ಮತ್ತು ಸೋಮಣ್ಣ . ಹೆಣ್ಣು ಮಕ್ಕಳು ಅಂದರೆ ಯಲ್ಲವ್ವ ಮತ್ತು ಲಕ್ಷ್ಮೀ .

ಮೋಹನ , ನಾರಾಯಣ ಮತ್ತು ಸೋಮಣ್ಣ ಇವರುಗಳು 1989 ರಲ್ಲಿ ಅಸಲು

ದಾವಾ ನಂಃ 148/1989 ರಂತೆ ಗಂಗಪ್ಪ ಮತ್ತು ಯಲ್ಲವ್ವ ಇವರ ವಿರುದ್ಧ ವಾಟಣಿ ದಾವೆ ಸಲ್ಲಿಸಿದ್ದರು ಎಂದರೆ ಸರಿ . ಸದರಿ ದಾವೆ ವಿಚಾರಣೆಯಾಗಿ ನಿಷ್ಕರ್ಶೆ ಆಗಿದೆ ಎಂದರೆ ಸರಿ . ಅಸಲು ದಾವೆ ಡಿಕ್ರಿಯಾದ ನಂತರ ಎಫ್ ಡಿ ಪಿ ನಂಃ 1/1999 ರಂತೆ ಅರ್ಜಿ ದಾಖಲಾಯಿತು ಎಂದರೆ ಸರಿ . ಸದರಿ ಅರ್ಜಿಯಲ್ಲಿ ನನ್ನ ತಂದೆ ಮತ್ತು ಯಲ್ಲವ್ವ ಇವರು ವಕೀಲರ ಮೂಲಕ ಅರ್ಜಿಯಲ್ಲಿ ಪ್ರತಿನಿಧಿಸಿದ್ದರು ಎಂದರೆ ಸರಿ . ಸದರಿ ಅರ್ಜಿಯಲ್ಲಿ ಸರಸ-ನಿರಸ ವಾಟಣಿಯಾಗಿದೆ ಎಂದರೆ ಸರಿ . ಸದರಿ ವಾಟಣಿ ಪ್ರಕಾರ ಉತಾರಗಳಲ್ಲಿ ಹೆಸರುಗಳು ಪ್ರತ್ಯೇಕವಾಗಿ ನಮೂದಾಯಿತು ಎಂದರೆ ಸರಿ . ಅದರನ್ವಯ ಆಯಾ ಹಿಸ್ಸೆದಾರರು ತಮ್ಮ ತಮ್ಮ ಹಿಸ್ಸೆಯನ್ನು ಹೊಂದಿ ಕಬ್ಜಾ ವಹಿವಾಟು ಮಾಡಿಕೊಂಡರು ಎಂದರೆ ಸಾಕ್ಷಿಯು ಮೋಹನ , ನಾರಾಯಣ ಮತ್ತು ಸೋಮಣ್ಣ ಇವರುಗಳು ಪ್ರತ್ಯೇಕ ಕಬ್ಜಾ ವಹಿವಾಟು ಹೊಂದರು ಎಂದು ಹೇಳುತ್ತಾರೆ . ಸದರಿ ಅಂತಿಮ ಡಿಕ್ರಿಯನ್ವಯ ನಾವುಗಳು ನಮ್ಮ ಹಿಸ್ಸೆಗೆ ಬಂದ ಸ್ವತ್ತುಗಳನ್ನು ನಾವು ಪ್ರತ್ಯೇಕ ಕಬ್ಜಾ ವಹಿವಾಟು ಹೊಂದಿದೆವು ಅದೇ ರೀತಿ ಯಲ್ಲವ್ವ ಇವರು ಪ್ರತ್ಯೇಕ ಕಬ್ಜಾ ವಹಿವಾಟು ಹೊಂದಿದರು ಎಂದರೆ ಸರಿಯಲ್ಲ .

ಯಲ್ಲವ್ವ ಇವರು ನಿಡಿ-2 ರಂತೆ ನಮ್ಮ ಹೆಸರಿಗೆ ಮೃತ್ಯು ಪತ್ರ ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಯಲ್ಲವ್ವ ಇವರ ಹಿಸ್ಸೆಗೆ ಬಂದ ಸ್ವತ್ತುಗಳನ್ನು ನಾವುಗಳು ಕಬ್ಜಾ ವಹಿವಾಟು ಹೊಂದಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಯಲ್ಲವ್ವ ಇವರು ವಾದಿಗೆ ಸೋದರತ್ತೆಯಾಗಬೇಕು ಎಂದರೆ ಸರಿ . ವಾದಿಯ ತಾಯಿ ನನ್ನ ಖಾಸ ಅಕ್ಕ ಎಂದರೆ ಸರಿ . ನಾನು ಮತ್ತು ನನ್ನ ಸಹೋದರರು ಪ್ರತ್ಯೇಕ ಮನೆ ಮತ್ತು ಜಮೀನು ಹೊಂದಿ ಕಬ್ಜಾ ವಹಿವಾಟು ಹೊಂದಿದ್ದೇವೆ ಎಂದರೆ ಸರಿಯಲ್ಲ . 2 ನೇ ಪ್ರತಿವಾದಿ ಬೇರೆಯಾಗಿ ನಾವು ವಾಸವಿರುವ ಮನೆಯ ಒಂದು ಭಾಗದ ಹಿಂಭಾಗದಲ್ಲಿ ನೆಲೆಸಿದ್ದಾನೆ ಎಂದರೆ ಸರಿ . ನಾನು

ಖುಲ್ಲಾ ಜಾಗದಲ್ಲಿ ಮನೆ ಮಾಡಿಕೊಂಡು ಇದ್ದೇನೆ ಎಂದರೆ ಸರಿ . 1 ನೇ ಪ್ರತಿವಾದಿ ಕರಿ ಹಂಚಿನ ಮನೆಯಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಕರಿ ಹಂಚಿನ ಮನೆ ಅಲ್ಲ ಆರ್ ಸಿ ಸಿ ಮನೆಯಲ್ಲಿ ನೆಲೆಸಿದ್ದಾರೆ ಎಂದು ಹೇಳುತ್ತಾರೆ . 4 ಮತ್ತು 6 ನೇ ಪ್ರತಿವಾದಿಯರು ಆರ್ ಸಿ ಸಿ ಪ್ರತ್ಯೇಕ ಮನೆ ಮಾಡಿಕೊಂಡು ನೆಲೆಸಿದ್ದಾರೆ ಎಂದರೆ ಸರಿ .

ನಾನು ಮತ್ತು ನನ್ನ ಸಹೋದರರು ಯಲ್ಲವ್ವ ಇವರನ್ನು ಸರಿಯಾಗಿ ದೆಕರಿಕೆ ಮಾಡಲಿಲ್ಲ ಎಂದರೆ ಸರಿಯಲ್ಲ . ನಿಡಿ-2 ನ್ನು ಬರೆದುಕೊಟ್ಟ ನಂತರ ನಾವುಗಳು ಯಲ್ಲವ್ವ ಇವರನ್ನು ಸರಿಯಾಗಿ ಊಟ ಕೊಡದೇ , ಔಷದೋಪಚಾರ ಮಾಡದೇ ಅವರನ್ನು ತಿರಸ್ಕಾರ ಮಾಡಿದ್ದೇವು ಎಂದರೆ ಸರಿಯಲ್ಲ . ಆ ಕಾರಣದಿಂದ ಯಲ್ಲವ್ವ ಇವರು ವಾದಿಯ ಜೊತೆ ಇರಲು ಹೋದರು ಎಂದರೆ ಸರಿಯಲ್ಲ . ವಾದಿಯು ಯಲ್ಲವ್ವ ಇವರನ್ನು ಒಳ್ಳೆಯ ರೀತಿಯಿಂದ ನೋಡಿಕೊಳ್ಳುತ್ತಿದ್ದ ಎಂದರೆ ಸಾಕ್ಷಿಯು ವಾದಿಯ ಮನೆಗೆ ಯಲ್ಲವ್ವ ಹೋಗಿಯೇ ಇಲ್ಲ ಎಂದು ಹೇಳುತ್ತಾರೆ . ಯಲ್ಲವ್ವ ಇವರು ವಾದಿಯ ಮನೆಗೆ ಹೋಗಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ವಾದಿಯ ಉಪಚಾರದಿಂದ ಪ್ರಸನ್ನಳಾದ ಯಲ್ಲವ್ವ ಇವರು ವಾದಿಯ ಹೆಸರಿಗೆ ನಿಪಿ-4 ರಂತೆ ಮೃತ್ಯು ಪತ್ರ ಬರೆದಿದ್ದಾರೆ ಎಂದರೆ ಸರಿಯಲ್ಲ . ನಿಪಿ-4 ಕ್ಕೆ ನನ್ನ ಮಗ ಲಕ್ಷ್ಮಣ ಸಾಕ್ಷಿಯಾಗಿ ಸಹಿ ಮಾಡಿದ್ದಾನೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ . ಸಾಕ್ಷಿಗೆ ನಿಪಿ-4 ರಲ್ಲಿ ಕಂಡುಬರುವ 1 ನೇ ಸಹಿಯನ್ನು ತೊರಿಸಲಾಗಿ ಸಾಕ್ಷಿಯು ಅದು ನನ್ನ ಮಗನ ಸಹಿ ಅಲ್ಲ ಎಂದು ಹೇಳುತ್ತಾರೆ , ನಿಪಿ-4 ರಲ್ಲಿ ಕಂಡುಬರುವ 1 ನೇ ಸಹಿ ನನ್ನ ಮಗನದ್ದು ಆಗಿದ್ದು ಅದನ್ನು ಒಪ್ಪಿಕೊಂಡರೇ ಈ ದಾವೆಯಲ್ಲಿ ನನಗೆ ಪರಿಹಾರ ಸಿಗುವುದಿಲ್ಲ ಎನ್ನುವ ಕಾರಣಕ್ಕಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ನಿಪಿ-4 ನ್ನು ಬರೆಯುವ ಕಾಲಕ್ಕೆ ಯಲ್ಲವ್ವ ಆರೋಗ್ಯವಾಗಿದ್ದು ಮತ್ತು ಅವಳ

ಓ ಎಸ್ ನಂಃ 57/2022
ಡಿ. ಡಬ್ಲ್ಯೂ-2

ಮಾನಸಿಕ ಸ್ಥಿತಿ ಒಳ್ಳೆಯದು ಇದ್ದು ಮತ್ತು ವಿವೇಚನಾ ಶಕ್ತಿ ಹೊಂದಿದ್ದಳು ಎಂದರೆ ಸರಿಯಲ್ಲ. ಯಲ್ಲವ್ವ ಇವರು ವಾದಿ ಪರವಾಗಿ ಬರೆದುಕೊಟ್ಟ ನಿಪಿ-4 ಕಾನೂನಿನ ಪ್ರಕಾರ ಊರ್ಜಿತವಾಗುತ್ತದೆ ಎಂದರೆ ಸರಿಯಲ್ಲ . ನಿಪಿ-4 ನ್ನು ಬರೆಯುವ ಕಾಲಕ್ಕೆ ಯಲ್ಲವ್ವ ಇವರು ಆರೋಗ್ಯವಾಗಿ ಇರಲಿಲ್ಲ ಎಂದು ತೋರಿಸಲು ನಾನು ಯಾವುದೇ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿಲ್ಲ . ನಿಡಿ-2 ರಿಂದ 6 ನ್ನು ನಾನು ಸೃಷ್ಟಿ ಮಾಡಿಕೊಂಡು ತಂದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ . ನನ್ನ ಸಾಕ್ಷ್ಯ ವಿಚಾರಣೆ ಪ್ರತಿಜ್ಞಾ ಪತ್ರದಲ್ಲಿ ಹೇಳಿರುವ ಮಾಹಿತಿಗಳು ಸುಳ್ಳು ಎಂದರೆ ಸರಿಯಲ್ಲ . ಯಲ್ಲವ್ವ ಇವರು ನಿಪಿ-4 ರಂತೆ ವಾದಿಯ ಹೆಸರಿಗೆ ಮೃತ್ಯು ಪತ್ರ ಮಾಡಿರುವ ವಿಚಾರ ನನಗೆ ಮತ್ತು ನನ್ನ ಕುಟುಂಬದವರಿಗೆ ಗೊತ್ತಿದ್ದರು ಸಹ ಈ ದಾವೆಯಲ್ಲಿ ಸುಳ್ಳು ತಕರಾರು ಸಲ್ಲಿಸಿ ಸುಳುಳ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.